ಹೇಳಿದ. ಹ್ಯಾರಿಸನ್ ಏನು ಮಾತನಾಡದೆ ಇದ್ದುದ್ದರಿಂದ ಪ್ವರೊ ಮುಂದುವರಿಸಿದ, 'ಅವನು ನಿನ್ನನ್ನು ಇಷ್ಟಪಡುತ್ತಾನೋ ಇಲ್ಲವೋ ಎಂಬುದೂ ನನಗೆ ಗೊತ್ತಿಲ್ಲ.'

'ಮಸ್ಯೂರ್ ಪ್ವರೊ, ನೀನು ಹೇಳುತ್ತಿರುವುದು ಏನು? ನಿನ್ನ ಮನಸ್ಸಿನಲ್ಲಿ ಏನಿದೆ, ನನಗೆ ಸ್ವಲ್ಪವೂ ಗೊತ್ತಾಗುತ್ತಿಲ್ಲ.'

'ನಾನು ಮುಚ್ಚುಮರೆಯಿಲ್ಲದೆ ಈಗ ಹೇಳುತ್ತೇನೆ, ಕೇಳಿಸಿಕೊ. ಮಸ್ಯೂರ್ ಹ್ಯಾರಿಸನ್, ನಿನ್ನ ಮದುವೆ ನಿಶ್ಚಯವಾಗಿದೆ. ಮಿಸ್ ಮೊಲಿ ಡೀನಳ (Molly Deane) ಪರಿಚಯ ನನಗಿದೆ. ಅವಳು ತುಂಬಾ ಸುಂದರಿ ಎನ್ನುವುದರಲ್ಲಿ ಎರಡು ಮಾತಿಲ್ಲ. ಅವಳಿಗೆ ನಿನ್ನ ಜೊತೆ ನಿಶ್ಚಿತಾರ್ಥವಾಗುವುದಕ್ಕೆ ಮುಂಚೆ, ಅವಳು ಕ್ಲಾಡ್ ಲ್ಯಾಂಗ್ಟನ್‌ನನ್ನು ಪ್ರೀತಿಸಿದ್ದಳು. ಆದರೆ, ಅವನನ್ನು ಬಿಟ್ಟು ಅವಳು ನಿನ್ನನ್ನು ಇಷ್ಟಪಟ್ಟಳು.'

ಹ್ಯಾರಿಸನ್ ಹೌದು ಎಂಬಂತೆ ತಲೆ ಅಲ್ಲಾಡಿಸಿದ.

'ಅವಳು ಆ ರೀತಿ ಮಾಡಿದ್ದೇಕೆ ಎಂದು ನಾನು ಕೇಳುವುದಿಲ್ಲ; ಅವಳದೇ ಆದ ಒಳ್ಳೆಯ ಕಾರಣಗಳಿರಬಹುದು. ಆದರೆ, ಇಷ್ಟು ಮಾತ್ರ ನಾನು ಹೇಳ ಬಯಸುತ್ತೇನೆ, ಲ್ಯಾಂಗ್ಟನ್ ಅದನ್ನಿನ್ನು ಮರೆತಿಲ್ಲ ಅಥವಾ ಕ್ಷಮಿಸಿಲ್ಲ ಎಂದರೆ ಅತಿಶಯವೇನಲ್ಲ.'

'ಮಸ್ಯೂರ್ ಪ್ವರೊ, ನಿನ್ನದು ತಪ್ಪು ಕಲ್ಪನೆ. ನಿನ್ನ ಅಭಿಪ್ರಾಯ ತಪ್ಪೆಂದು ನಾನು ಪ್ರಮಾಣ ಮಾಡುತ್ತೇನೆ. ಲ್ಯಾಂಗ್ಟನ್ ಒಬ್ಬ ಕ್ರೀಡಾಪಟುವಿನಂತೆ ಇದನ್ನೆಲ್ಲವನ್ನು ಒಳ್ಳೆಯ ರೀತಿಯಲ್ಲೇ ಸ್ವೀಕರಿಸಿದ್ದಾನೆ. ನನಗೆ ಅಚ್ಚರಿಯಾಗುವಷ್ಟು ಉದಾರತೆ ತೋರಿಸಿದ್ದಾನೆ. ಅವನು ಆಗಿದ್ದನ್ನೆಲ್ಲಾ ಮರೆತು ನನ್ನ ಸ್ನೇಹಿತನಾಗಲು ಶಕ್ತಿಮೀರಿ ಪ್ರಯತ್ನಿಸಿದ್ದಾನೆ.'

'ಅದು ಸಾಮಾನ್ಯ ನಡವಳಿಕೆಯಲ್ಲ ಎಂದು ನಿನಗನ್ನಿಸುವುದಿಲ್ಲವೇ? ನೀನು 'ಅಚ್ಚರಿಯಾಗುವಷ್ಟು' ಎಂಬ ಪದ ಬಳಸಿದೆ, ಆದರೆ, ನೀನು ಆಶ್ಚರ್ಯಚಕಿತನಾದಂತೆ ಕಾಣಿಸುತ್ತಿಲ್ಲ.'

'ನೀನು ಏನು ಹೇಳುತ್ತಿದ್ದೀಯಾ, ಪ್ವರೊ?'

'ನಾನು ಹೇಳುತ್ತಿರುವುದೇನೆಂದರೆ, ಒಂದು ಒಳ್ಳೆಯ ಸಮಯ ಬರುವವರೆಗೂ ವ್ಯಕ್ತಿಯೊಬ್ಬ ತನ್ನ ದ್ವೇಷವನ್ನು ಮರೆಮಾಚಬಹುದು ಎಂದು'– ಪ್ವರೊ ಹೇಳಿದಾಗ ಅವನ ಧ್ವನಿಯಲ್ಲಿ ಒಂದು ಹೊಸತನವಿತ್ತು.

'ದ್ವೇಷ?' ಹ್ಯಾರಿಸನ್ ತಲೆ ಅಲ್ಲಾಡಿಸುತ್ತಾ ನಕ್ಕ.

'ಇಂಗ್ಲೀಷರು ತುಂಬಾ ಮೂರ್ಖರು' ಎಂದು ಪ್ವರೊ ಹೇಳಿದ. 'ಯಾರಿಗೆ ಬೇಕಾದರು ಅವರು ಮೋಸ ಮಾಡಬಲ್ಲರು. ಆದರೆ, ಅವರು ತಾವು ಮಾತ್ರ ಯಾರಿಂದಲೂ ಮೋಸ ಹೋಗುವುದಿಲ್ಲ ಎಂದು ಯೋಚಿಸುತ್ತಾರೆ. ಒಬ್ಬ ಕ್ರೀಡಾಪಟು ಅಥವಾ ಒಬ್ಬ ಒಳ್ಳೆಯ ವ್ಯಕ್ತಿ ಕೆಟ್ಟದ್ದನ್ನು ಮಾಡುತ್ತಾನೆಂದು ಅವರೆಂದೂ ನಂಬುವುದಿಲ್ಲ. ಅವರು ಧೈರ್ಯವಂತರು. ಆದರೆ, ಪೆದ್ದರಾಗಿರುವುದರಿಂದ ಅನವಶ್ಯಕವಾಗಿ ಸಾಯುತ್ತಾರೆ.'

'ನೀನು ನನಗೆ ಎಚ್ಚರಿಕೆ ಕೊಡುತ್ತಿದ್ದೀಯಾ' ಹ್ಯಾರಿಸನ್ ತಗ್ಗಿದ ಧ್ವನಿಯಲ್ಲಿ ಹೇಳಿದ. 'ಇಲ್ಲಿಯವರೆಗೆ ನನಗೆ ಒಗಟಾಗಿದ್ದುದು ಏನೆಂದು ನನಗೀಗ ಅರ್ಥವಾಗುತ್ತಿದೆ. ಕ್ಲಾಡ್ ಲ್ಯಾಂಗ್ಟನ್‌ನ ವಿಷಯದಲ್ಲಿ ಎಚ್ಚರಿಕೆಯಿಂದಿರು ಎಂದು ನೀನು ನನಗೆ ಹೇಳುತ್ತಿದ್ದೀಯಾ. ಆ ಎಚ್ಚರಿಕೆ ಕೊಡಲು ನೀನು ಇವತ್ತು ಇಲ್ಲಿಗೆ ಬಂದಿದ್ದೀಯಾ.'

ಪ್ವರೊ ತಲೆದೂಗಿದ ಕೂಡಲೇ ಹ್ಯಾರಿಸನ್ ಜಿಗಿದೆದ್ದು ನಿಂತ. 'ಮಸ್ಯೂರ್ ಪ್ವರೊ, ನೀನೊಬ್ಬ ಹುಚ್ಚ. ಇದು ಇಂಗ್ಲೆಂಡ್, ಇಲ್ಲಿ ಅಂತಹ ಘಟನೆಗಳು ಸಂಭವಿಸುವುದಿಲ್ಲ. ಭಗ್ನ ಪ್ರೇಮಿಗಳು